**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ ಇವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

**ವಿಷಯ:** **"ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ನೇರ ನೇಮಕಾತಿ ಹೊಂದಿ ಸುಮಾರು 22 ವರ್ಷಗಳಿಂದ ಅಸಿಸ್ಟೆಂಟ್ ಸರ್ಜನ್‌ಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ 06 ಜನ ಮತ್ತು 05 ಜನ ಕರ್ತವ್ಯ ವೈದ್ಯಾಧಿಕಾರಿಗಳು ಸೇರಿ ಒಟ್ಟು 11 ಮಂದಿ ವೈದ್ಯರು ಒಂದೇ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಹೊಂದದೇ ಕಾರ್ಯನಿರ್ವಹಿಸುತ್ತಿದ್ದು, ಇವರುಗಳಿಗೆ ಸರ್ಕಾರದ ಆದೇಶ ಸಂಖ್ಯೆ:HFW 222 MSS 90 dated:19.07.1991 And HFW 557 HSH 2011, dated:03.01.2012 ಅನುಸಾರ ಮುಂಬಡ್ತಿ ನೀಡಲು ದಿನಾಂಕ:26.03.2025ರಂದು ನಡೆದ ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆರ್ಥಿಕ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡಿರುವ ತಿರ್ಮಾನವನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ದಿನಾಂಕ:27.08.2025ರಂದು ನಡೆದ Special Governing Council ಸಭೆಯಲ್ಲಿ ಅಂಗೀಕಾರ ಮಾಡಲಾಗಿರುತ್ತದೆ. ಸದರಿ ತೀರ್ಮಾನವನ್ನು ಪುನಃ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆರ್ಥಿಕ ಸಲಹಾ ಸಮಿತಿಯು ದಿನಾಂಕ:15.09.2025ರ ಸಭೆಯಲ್ಲಿ ಸ್ವಿರಿಕರಿಸಲಾಗಿದ್ದರೂ ಸಹ ಇಲ್ಲಿಯವರೆಗೆ ಅದು ಜಾರಿಗೆ ಬರದಿರಲು ಕಾರಣವೇನು?."**

* * * * * * *

**ಉತ್ತರ:** ದಿನಾಂಕ:26-03-2025ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯ ನಡವಳಿ ವಿಷಯ ಸೂಚಿ ಸಂಖ್ಯೆ-13ರಲ್ಲಿ ಶ್ರೀ ಜಯದೇವ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಸಿಸ್ಟೆಂಟ್ ಸರ್ಜನ್ / ಡ್ಯೂಟಿ ಮೆಡಿಕಲ್ ಆಫೀಸರ್‌ಗಳಿಗೆ ಸರ್ಕಾರದ ಆದೇಶ ಸಂಖ್ಯೆ:HFW 222 MSS 1990, ದಿನಾಂಕ:19-07-1991 ಮತ್ತು HFW 557 HSH 2011, ದಿನಾಂಕ:03-01-2012ರ ಆದೇಶವನ್ನು ಜಾರಿಗೊಳಿಸಲು ಹಾಗೂ ವೈದ್ಯರುಗಳಿಗೆ ಟೈಮ್ ಬಾಂಡ್ ಸ್ಕೇಲ್ ಮತ್ತು ಪದನಾಮ ನೀಡಲು ಅನುಮೋದನೆಗಾಗಿ ಕೋರಲಾಗಿದ್ದು, ಈ ಬಗ್ಗೆ ಸದರಿ ಸಭೆಯಲ್ಲಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಸಿಸ್ಟೆಂಟ್ ಸರ್ಜನ್ / ಡ್ಯೂಟಿ ಮೆಡಿಕಲ್ ಆಫೀಸರ್‌ಗಳಿಗೆ ನಿಯಮಗಳನ್ವಯ ಟೈಮ್ ಬಾಂಡ್ ಸ್ಕೇಲ್ ನೀಡಲು ಅನುಮೋದಿಸಲಾಗಿರುತ್ತದೆ.

ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಸಿಸ್ಟೆಂಟ್ ಸರ್ಜನ್ ಗಳಿಗೆ ಸರ್ಕಾರದ ದಿನಾಂಕ:19-07-1991ರ ಆದೇಶದ ಪ್ರಕಾರ ಈಗಾಗಲೇ ನಿಯಮಗಳನ್ವಯ ಅರ್ಹರಿದ್ದ ಕೆಲವು ವೈದ್ಯರುಗಳಿಗೆ ಮೊದಲೇ ಟೈಮ್ ಬಾಂಡ್ ಸ್ಕೇಲ್ ನೀಡಲಾಗಿರುತ್ತದೆ. ಆದರೆ ದಿನಾಂಕ:26-03-2025ರಂದು ನಡೆದ ಆರ್ಥಿಕ ಸಮಿತಿಯಲ್ಲಿ ಟೈಮ್ ಬಾಂಡ್ ಸ್ಕೇಲ್

ನೀಡಲು ಅನುಮೋದಿಸಿದ್ದು ಪದನಾಮವನ್ನು ನೀಡಲು ಅನುಮೋದಿಸಿರುವುದಿಲ್ಲ. ಆದಕಾರಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಅಸಿಸ್ಟೆಂಟ್ ಸರ್ಜನ್/ಡ್ಯೂಟಿ ಮೆಡಿಕಲ್ ಆಫೀಸರ್‌ಗಳಿಗೆ ನಿಯಮಗಳನ್ವಯ ಪದನಾಮ ನೀಡಿರುವುದಿಲ್ಲ. ಸರ್ಕಾರಿ ಆದೇಶದನ್ವಯ ವೇತನಶ್ರೇಣಿ/ಪದನಾಮ ನೀಡುವ ಬಗ್ಗೆ ಮುಂಬರುವ ಸಂಸ್ಥೆಯ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗುವುದು.

**ಕಡತ ಸಂ: ಎಂಇಡಿ 134 ಎಂಎಸ್‌ಎಫ್ 2026**

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.